ದಿನಾಂಕಃ 09-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ನನ್ನ ತಂಗಿ ಶವ ಇತ್ತು, ಶವವನ್ನು ಪರಿಶೀಲಿಸಿದಾಗ ತಲೆಗೆ ರಕ್ತಗಾಯವಾಗಿತ್ತು. ಪೊಲೀಸರಿಗೆ ದೂರು ಕೊಟ್ಟಿರುತ್ತೇನೆ. ನ್ಯಾಯಾಲಯದಲ್ಲಿರುವ ದಾಖಲೆಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ದೂರನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನನ್ನ ತಂಗಿ ಗಂಡನ ಮೇಲೆ ನಾನು ಪೊಲೀಸರಿಗೆ ದೂರು ಕೊಟ್ಟಿರುತ್ತೇನೆ. ನನ್ನ ತಂಗಿ ಸಾವಿಗೆ ಯಾರು ಕಾರಣ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಂಗಿ ಸಾವಿಗೆ ಅವಳ ಗಂಡ ರಾಮಾಂಜಿ ಕಾರಣರಾಗಿರುವುದಿಲ್ಲ. ನಂತರ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ತೆಗೆದುಕೊಂಡು ಹೋಗಿರುತ್ತಾರೆ. ನಂತರ ನನ್ನ ತಂಗಿ ಅಂತ್ಯಸಂಸ್ಕಾರ ಮಾಡಿರುತ್ತಾರೆ, ಅಂತ್ಯಸಂಸ್ಕಾರಕ್ಕೆ ಆರೋಪಿ ಹಾಜರಿರಲಿಲ್ಲ. ಅಂತ್ಯಸಂಸ್ಕಾರದ ಸಮಯದಲ್ಲಿ ಆರೋಪಿ ಜೈಲಿನಲ್ಲಿದ್ದ.

ನ್ಯಾಯಾಲಯದಲ್ಲಿರುವ ದಾಖಲೆಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಮಹಜರನ್ನು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ದಿ. 16 ನೇ ತಾರೀಖು ನನ್ನ ತಂಗಿ ಸತ್ತು ಬಿದ್ದಿರುವ ಸ್ಥಳದಲ್ಲಿ ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ. ನಿಪಿ-2 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಸ್ಥಳದಿಂದ ಪೊಲೀಸರು ಏನನ್ನೂ ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಆರೋಪಿ ಏನು ಮಾಡಿಕೊಂಡಿರುತ್ತಾನೆಂದು ನನಗೆ ಗೊತ್ತಿಲ್ಲ. ಇಷ್ಟನ್ನು ಹೊರತುಪಡಿಸಿ ಬೇರೆ ಏನೂ ವಿಚಾರ ನನಗೆ ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-**

ನಿಪಿ-1 ರಲ್ಲಿ ಬರೆದ ಬರವಣಿಗೆ ಯಾರದು ಎಂದು ನನಗೆ ಗೊತ್ತಿಲ್ಲ. ನನ್ನ ತಂಗಿ ಸಾಯುವುದಕ್ಕಿಂತ 5-6 ತಿಂಗಳ ಹಿಂದೆ ಆರೋಪಿ ನನ್ನ ತಂಗಿ ಲಕ್ಷ್ಮಿ ನರಸಿಂಹಮೂರ್ತಿ ರವರ

ಚಾಸಾ-1

ಜೊತೆ ಫೋನ್‌ನಲ್ಲಿ ಮಾತನಾಡುತ್ತಾಳೆ , ಅವನ ಜೊತೆ ಸಂಬಂಧ ಇಟ್ಟುಕೊಂಡಿರುತ್ತಾಳೆಂದು ಆರೋಪಿ ಅನುಮಾನಪಟ್ಟು ಆರೋಪಿ ಯಾವಾಗಲೂ ಹೊಡೆಯುವುದು ಬಡಿಯುವುದು ಮಾಡುತ್ತಿರುತ್ತಾನೆಂದು ಲಕ್ಷ್ಮಿ ನನಗೆ ಹೇಳಿರುತ್ತಾಳೆ ಎಂದರೆ ಸರಿಯಲ್ಲ. ನಾನು , ನನ್ನ ಸಂಬಂಧಿ ಮಲ್ಲೇಶ , ಲಕ್ಷ್ಮೀದೇವಿ , ಸತ್ಯಪ್ಪ ಎಲ್ಲರೂ ಸೇರಿ ರಾಜೀ ಪಂಚಾಯಿತಿ ಮಾಡಿ ಹೊಂದಾಣಿಕೆಯಿಂದ ಸಂಸಾರ ಮಾಡಿಕೊಂಡು ಹೋಗುವಂತೆ ಬುದ್ದಿವಾದ ಹೇಳಿದ್ದೇವು ಎಂದರೆ ಸರಿಯಲ್ಲ.

ದಿ. 15.08.2023 ರಂದು ರಾತ್ರಿ 11-50 ಕ್ಕೆ ನನ್ನ ತಮ್ಮ ನನಗೆ ಫೋನ್ ಮಾಡಿ ಬೂದಿಬೆಟ್ಟದ ಕೃಷ್ಣಪ್ಪ ನನಗೆ ಫೋನ್ ಮಾಡಿ ರಾತ್ರಿ 10-30 ರಿಂದ 11-00 ಗಂಟೆಗೆ ಲಕ್ಷ್ಮೀ ಶೀಲದ ಬಗ್ಗೆ ಶಂಕಿಸಿ ಆಕೆಯ ಮೇಲೆ ಜಗಳ ಮಾಡಿ ಆಕೆಯನ್ನು ಮನೆಯ ಬಳಿ ಒಣಕೆಯಿಂದ ತಲೆಗೆ ಹೊಡೆದು ಕೊಲೆ ಮಾಡಿರುತ್ತಾನೆಂದು ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ನಂತರ ನಾನು ಬೂದಿಬೆಟ್ಟ ಗ್ರಾಮಕ್ಕೆ ಹೋಗಿ ನೋಡಿದಾಗ ನನ್ನ ತಂಗಿ ಬೋರಲಾಗಿ ಬಿದ್ದಿದ್ದು ರಕ್ತಗಾಯವಾಗಿ ರಕ್ತ ಹೆಪ್ಪುಗಟ್ಟಿತ್ತು ಎನ್ನುವುದು ನಿಜ. ಸ್ವಲ್ಪ ದೂರು ಕಾಲು ದಾರಿಯಲ್ಲಿ ಒಣಕೆ ತುಂಡು ಬಿದಿದ್ದತ್ತು ಅದರ ಪಕ್ಕ ಒಂದು ಚಾಕು ಬಿದ್ದಿತ್ತು ಎಂದರೆ ನನಗೆ ಗೊತ್ತಿಲ್ಲ. ಲಕ್ಷ್ಮೀಶ ಮಕ್ಕಳಾದ ಚಾಸಾ-8 ಮತ್ತು 9 ರವರನ್ನು ಕೇಳಲಾಗಿ ಅವರ ತಂದೆ ಕಟ್ಟಿಗೆಯಿಂದ ಅಮ್ಮನಿಗೆ ಹೊಡೆದ, ಹೊಡೆದ ಮೇಲೆ ಚಾಕುವಿನಿಂದ ಕೈ ಕೊಯ್ದುಕೊಂಡು ಹೊರಟು ಹೋದ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಲಕ್ಷ್ಮೀ ನರಸಿಂಹಮೂರ್ತಿಯೊಂದಿಗೆ ಸಂಬಂಧ ಇಟ್ಟುಕೊಂಡಿದ್ದಾಳೆಂದು ಅನುಮಾಪಟ್ಟು ಲಕ್ಷ್ಮೀಗೆ ಒಣಕೆಯಿಂದ ಹೊಡೆದು ಕೊಲೆ ಮಾಡಿ ಹೊರಟು ಹೋಗಿರುತ್ತಾನೆ ನಾನು ಕೆಲಸದ ನಿಮಿತ್ತ ನನ್ನ ತಮ್ಮ ಆಂಧ್ರಕ್ಕೆ ಹೋಗಿದ್ದರಿಂದ ನಾನು ಬರುವುದು ತಡವಾಗುತ್ತದೆ ನೀನು ಬೂದಿಬೆಟ್ಟಕ್ಕೆ ಹೋಗಿ ವಿಚಾರ ಮಾಡಿ ದೂರು ಕೊಡು ಎಂದು ಹೇಳಿದ್ದ ನಾನು ನನ್ನ ಸಂಬಂಧಿಕರಿಗೆ ತಿಳಿಸಿ ರಾತ್ರಿ ಅವೇಳೆಯಾಗಿದ್ದರಿಂದ ವಾಹನ ಸೌಕರ್ಯ ಇಲ್ಲದೇ ಇದುದ್ದರಿಂದ ತಡವಾಗಿ ಬೆಳಿಗ್ಗೆ 6-05 ಗಂಟೆಗೆ ದೂರು ಕೊಟ್ಟಿರುತ್ತೇನೆ ಎಂದರೆ ನಿಜ. ನಾನು ಪೊಲೀಸರು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವ ವಿಷಯಗಳು ನಾನೇ ಹೇಳಿ ಬರೆಸಿದ್ದರೂ ಬರೆಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಚಾಸಾ-1

ದಿ. 16.08.2023 ರಂದು ಬೆಳಿಗ್ಗೆ 7-30 ರಿಂದ 8-30 ಗಂಟೆಗೆ ಲಕ್ಷ್ಮೀದೇವಮ್ಮ ಇರುವ ಜಾಗದಲ್ಲಿ ಪೊಲೀಸರು ನಿಪಿ-2 ರಂತೆ ಪಂಚನಾಮೆ ಮಾಡಿ ಒಂದು ಚಾಕು , ಕಾಲು ಒರಿಸುವ ಬಟ್ಟೆ, ಮುಖ್ಯ ಗೇಟ್ ಹತ್ತಿರ ಇರುವ ರಕ್ತ ಸಂಗ್ರಹಿಸಿ , ಒಂದು ಒಣಿಕೆ ತುಂಡು , ತಲೆ ದಿಂಬು, ಚಾಪೆ , ಕೌದಿ ನಿಪಿ-2 ರಂತೆ ಪಂಚನಾಮೆ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-2 ನ್ನು ಪೊಲೀಸರು ನನಗೆ ಓದಿ ಹೇಳಿ ನಂತರ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ . ನ್ಯಾಯಾಲಯದ ಮುಂದೆ ಇರುವ 2 ಪೊಟೋಗಳನ್ನು ನೋಡಿದ್ದು, ಅದರಲ್ಲಿ ತನ್ನ ಇರುವಿಕೆಯನ್ನು ಗುರುತಿಸಿರುತ್ತಾರೆ, ಸದರಿ ಪೊಟೋಗಳನ್ನು ನಿಪಿ-3 ಮತ್ತು 4 11 ಎಂದು ಗುರುತಿಸಲಾಯಿತು. ನಿಪಿ-3 ರಲ್ಲಿ ತನ್ನ ಇರುವಿಕೆಯನ್ನು ಗುರುತಿಸಿರುತ್ತಾರೆ. ಸದರಿ ನಿಪಿ-3 ರಲ್ಲಿ ನನ್ನ ತಂಗಿ ಶವ ಕಾಣಿಸುತ್ತಿದೆ. ಸದರಿ ಪೊಟೋದಲ್ಲಿ ಶವದ ತಲೆಗೆ ರಕ್ತಗಾಯವಾಗಿರುವುದು ಮತ್ತು ಒಣಕೆಗೆ ರಕ್ತದ ಕಲೆ ಆಗಿರುವುದು ಕಂಡುಬರುತ್ತದೆ.

ನ್ಯಾಯಾಲಯದ ಮುಂದೆ ಇರುವ ಒಂದು ಬಿಳಿ ಬಟ್ಟೆಯ ಪ್ಯಾಕ್ ಹಾಜರುಮಾಡಿದ್ದು ಅದರ ಮೇಲೆ ಸೀಲ್ ಸುಸ್ಥಿತಿಯಲ್ಲಿರುತ್ತದೆ. ಸದರಿ ಬಿಳಿ ಬಟ್ಟೆಯ ಸೀಲ್ ಆಗಿರುವ ಪ್ಯಾಕನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದು ನೋಡಲಾಗಿ ಅದರಲ್ಲಿರುವ ಒಣಕೆ ತುಂಡ ಇದ್ದು ಅದನ್ನು ಸಾಕ್ಷಿ ಗುರುತಿಸಿದ ಮೇರೆಗೆ ಮು.ಮಾ-1 ಎಂದು ಗುರುತಿಸಲಾಯಿತು. ಸ್ಥಳದಲ್ಲಿ ನಾನು ಚಾಪೆ , ದಿಂಬು ಇತರೆ ವಸ್ತುಗಳನ್ನು ನಾನು ನೋಡಿರುವುದಿಲ್ಲ. ನಾನು ಸ್ಥಳದಲ್ಲಿ ಚಾಪೆ , ದಿಂಬು , ಚಾಕು ಮತ್ತು ಇತರೆ ವಸ್ತುಗಳನ್ನು ನೋಡಿದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಶವ ತನಿಖಾ ಕಾಲದಲ್ಲಿ ಹಾಜರಿದ್ದು ಅಲ್ಲಿಯುವೂ ಕೂಡ ಪೊಲೀಸರಿಗೆ ಆರೋಪಿಯೇ ನನ್ನ ತಂಗಿ ಶೀಲ ಶಂಕಿಸಿ ಕೊಲೆ ಮಾಡಿರುತ್ತಾನೆಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಪಾವಗಡ ಸರ್ಕಾರಿ ಆಸ್ಪತ್ರೆಯ ಶವಗಾರದಲ್ಲಿ ಪೊಲೀಸರು ಬೆಳಿಗ್ಗೆ 10-00 ರಿಂದ 1-00 ಗಂಟೆಯವರೆಗೂ ಪಂಚನಾಮೆ ಮಾಡಿರುತ್ತಾರೆ ಎನ್ನುವುದು ನಿಜ. ನ್ಯಾಯಾಲಯದಲ್ಲಿರುವ ದಾಖಲೆಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಶವ ಪಂಚನಾಮೆಯನ್ನು ನಿಪಿ-5 ಎಂದು, ಸಾಕ್ಷಿ ಹೇಳಿಕೆಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಶವಗಾರದಲ್ಲಿ ಪೊಲೀಸರು 3 ಪೊಟೋಗಳು ತೆಗೆದಿರುತ್ತಾರೆ ಎನ್ನುವುದು ನಿಜ. ಸದರಿ ಪೊಟೋಗಳನ್ನು ಸಾಕ್ಷಿಗೆ ತೋರಿಸಿದ್ದು

ಅವುಗಳನ್ನು ಗುರುತಿಸಿದ ಮೇರೆಗೆ ನಿಪಿ-6 ರಿಂದ ನಿಪಿ-8 ಎಂದು ಗುರುತಿಸಲಾಯಿತು. ನರಸಿಂಹಮೂರ್ತಿ ಇವರು ಕೆ. ರಾಮಪುರದ ಶಿಕ್ಷಕರು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಸಾಯಬೇಕೆಂದು ತನ್ನ ಎಡಗೈ ನಾಡಿಯನ್ನು ಕೊಯ್ದುಕೊಂಡಿರುತ್ತಾನೆ ಎಂದರೆ ಗೊತ್ತಿಲ್ಲ. ನನ್ನ ತಂಗಿ ಸಾವಿಗೆ ಆರೋಪಿಯೋ ಕಾರಣ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು ಶ್ರೀ. ಪಿ.ಎನ್.ಆರ್. ವಕೀಲರಿಂದ ಆರೋಪಿ ಪರವಾಗಿ:-</u>**

ನನ್ನ ತಂಗಿ ನನಗಿಂತ ಮೂರು ವರ್ಷ ಚಿಕ್ಕವಳು. ನನ್ನ ತಂಗಿ ಆರೋಗ್ಯದ ಬಗ್ಗೆ ಚೆನ್ನಾಗಿ ಗೊತ್ತಿರುತ್ತದೆ. ನನ್ನ ತಂಗಿಗೆ ಬಿ.ಪಿ , ಶುಗರ್ ಕಾಯಿಲೆ ಇತ್ತು. ನಾನು ನನ್ನ ತಂಗಿ ಸತ್ತು ಬಿದ್ದಿರುವ ಜಾಗಕ್ಕೆ ಬೆಳಿಗ್ಗೆ 8-00 ರಿಂದ 8-30 ಗಂಟೆಗೆ ಹೋಗಿರುತ್ತೇನೆ. ನನ್ನ ತಂಗಿಯ ಮನೆಯ ಮುಂದೆ ಚೂಪಾದ ಕಲ್ಲುಗಳು ಇರುತ್ತವೆ ಎನ್ನುವುದು ನಿಜ. ನನ್ನ ತಂಗಿಗೆ ಬಿ.ಪಿ. ಶುಗರ್ ಹೆಚ್ಚು ಕಡಿಮೆ ಆದಾಗ ತಲೆ ಸುತ್ತು ಬರುತ್ತಿತ್ತು ಎನ್ನುವುದು ನಿಜ. ನನ್ನ ತಂಗಿ ಶವ ತಲೆಗೆ ಚೂಪಾದ ಕಲ್ಲು ತಗುಲಿತ್ತು ಎಂದರೆ ನಿಜ. ಒಣಕೆಯ ಎರಡು ಬದಿಯಲ್ಲಿ ಕಬ್ಬಿಣದ ಬಳೆಗಳು ಇರುತ್ತವೆ ಎಂದರೆ ನಿಜ. ಮು.ಮಾ-1 ಕ್ಕೆ ಎರಡು ಬದಿಗೆ ಕಬ್ಬಿಣದ ಬಳೆ ಇರುವುದಿಲ್ಲ ಎನ್ನುವುದು ನಿಜ. ಮು.ಮಾ-1 ರ ಮೇಲೆ ಯಾವುದೇ ರಕ್ತದ ಕಲೆಗಳು ಇರುವುದಿಲ್ಲ ಎನ್ನುವುದು ನಿಜ. ಮು.ಮಾ-1 ಮತ್ತು ನಿಪಿ-3 ಮತ್ತು 4 ರಲ್ಲಿರುವ ಕಟ್ಟಿಗೆ ವೆತ್ಯಾಸ ಇರುತ್ತದೆ ಎಂದರೆ ನಿಜ.

ನಿಪಿ-2 ಪಂಚನಾಮೆ ಸಮಯದಲ್ಲಿ ಯಾರು ಯಾರು ಬಂದಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ನಿಪಿ-2 ಪಂಚನಾಮೆಯನ್ನು ಯಾರು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ನನ್ನ ತಂಗಿಯ ಮನೆಯಲ್ಲಿ ವರಂಡ ಇರುವುದಿಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**